ಕರ್ನಾಟಕ ವಿಧಾನಸಭೆ

ಶುಕ್ರವಾರ 11ನೇ ಜೂನ್ 2004ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಷತ್ತಿನ ಸಭಾಂಗಣದಲ್ಲಿ ಬೆಳಿಗ್ಗೆ 12.30 ಗಂಟೆಗೆ ಸಮಾವೇಶಗೊಂಡಿತು

ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದ ಅಧಿಕೃತ ವರದಿ

ಘನತೆವೆತ್ತ ರಾಜ್ಯಪಾಲರಾದ ಶ್ರೀ ಟಿ.ಎನ್. ಚತುರ್ವೇದಿಯವರು ಕರ್ನಾಟಕ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಸಂಯುಕ್ತಾಧಿವೇಶನವನ್ನು ಉದ್ದೇಶಿಸಿ ವಿಧಾನ ಸಭೆಯ ಸಭಾಂಗಣದಲ್ಲಿ ದಿನಾಂಕ 11ನೇ ಜೂನ್ 2004ರ ಶುಕ್ರವಾರದಂದು ಬೆಳಿಗ್ಗೆ 12–30 ಗಂಟೆಗೆ ಮಾಡಿದ ಭಾಷಣ.

ಘನತೆವೆತ್ತ ರಾಜ್ಯಪಾಲರು ಬೆಳಿಗ್ಗೆ 12–30 ಗಂಟೆಗೆ ವಿಧಾನ ಸೌಧದ ಮುಖ್ಯದ್ವಾರದ ಬಳಿ ಇರುವ ದ್ವಾರಮಂಟಪಕ್ಕೆ ಆಗಮಿಸಿದರು. ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಅವರನ್ನು ವಿಧಾನ ಸಭೆಯ ಮಾನ್ಯ ಅಧ್ಯಕ್ಷರು, ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು ವಿಧಾನ ಸಭೆಯ ಕಾರ್ಯದರ್ಶಿಯವರು ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು ಸ್ವಾಗತಿಸಿದರು. ನಂತರ ಪೂರ್ವ ಭಾಗದ ಮೆಟ್ಟಿಲುಗಳ ಮೂಲಕ ರಾಜ್ಯಪಾಲರು ಆಗಮಿಸಿದರು. ನಂತರ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು.

ಶ್ರೀ ಟಿ. ರಾಜಣ್ಣ
ವಿಧಾನ ಸಭೆಯ ಕಾರ್ಯದರ್ಶಿಯವರು

ಶ್ರೀ ಜಯಶಂಕರ ಮೂರ್ತಿ
ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು

ಶ್ರೀ ಕೃಷ್ಣ
ವಿಧಾನ ಸಭೆ ಅಧ್ಯಕ್ಷರು

ಶ್ರೀ ವಿ.ಆರ್. ಸುದರ್ಶನ್
ವಿಧಾನ ಪರಿಷತ್ತಿನ ಸಭಾಪತಿಯವರು

ಶ್ರೀ ಟಿ.ಎನ್. ಚತುರ್ವೇದಿ
ರಾಜ್ಯಪಾಲರು
ಎಡಿಸಿ

ಈ ರೀತಿಯ ಮೆರವಣಿಗೆಯು ವಿಧಾನ ಸಭಾ ಸದನದ ಕಡೆಗೆ ಆಗಮಿಸಿತು. ಸಭಾ ಸದನದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೇ ರಾಜ್ಯಪಾಲರ ಆಗಮನವನ್ನು ಮಾರ್ಷಲ್‌ರವರು ಸಭೆಗೆ ತಿಳಿಸಿದರು. ಮತ್ತು ರಾಷ್ಟ್ರಗೀತೆಯನ್ನು ನುಡಿಸಲಾಯಿತು. ರಾಜ್ಯಪಾಲರು ಸದನವನ್ನು ಪ್ರವೇಶಿಸಿ ವೇದಿಕೆಯ ಮೇಲೆ ಕುಳಿತುಕೊಳ್ಳುವ ತನಕ ಮಾನ್ಯ ಸದಸ್ಯರುಗಳು ಎದ್ದು ನಿಂತುಕೊಂಡಿದ್ದರು.

ಸಭಾ ಸದನದ ವೇದಿಕೆಯ ಮುಂದೆ ಬಂದ ಬಳಿಕ ಮೆರವಣಿಗೆಯು ಎರಡು ಭಾಗವಾಗಿ ಬೇರ್ಪಟ್ಟಿತು. ವೇದಿಕೆಯ ಮೇಲೆ ಮಾನ್ಯ ಅಧ್ಯಕ್ಷರು ರಾಜ್ಯಪಾಲರ ಎಡಭಾಗದಲ್ಲಿ ಮಾನ್ಯ ಸಭಾಪತಿಯವರು ರಾಜ್ಯಪಾಲರ ಬಲಭಾಗದಲ್ಲಿ ಕುಳಿತುಕೊಂಡರು. ರಾಜ್ಯಪಾಲರು ವೇದಿಕೆಯ ಮಧ್ಯಭಾಗದಲ್ಲಿನ ಆಸನದಲ್ಲಿ ಕುಳಿತುಕೊಂಡರು. ಉಭಯ ಸದನಗಳ ಕಾರ್ಯದರ್ಶಿಗಳವರು ವೇದಿಕೆಯ ಮುಂದುಗಡೆ ಇರುವ ಆಸನದಲ್ಲಿ ಕುಳಿತುಕೊಂಡರು.

(ನಂತರ ಘನತೆವೆತ್ತ ರಾಜ್ಯಪಾಲರು ತಮ್ಮ ಭಾಷಣವನ್ನು ಪ್ರಾರಂಭಿಸಿದರು)